# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದ)

ಫೋನ್ ನಂ: 0821 – 2417106
ಫ್ಯಾಕ್ಸ್ ನಂ: 0821 – 2417105
e-mail:fa@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ಬಿಜಯ ನಗರ 2ನೇ ಹಂತ,
ಹಿನಕಲ್, ಮೈಸೂರು.570017.

ಕ್ರಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ಲೆಕ್ಕ&ಕಂ)/ಸಪ್ರವ್ಯ(ತೆ)/17–18/ 415-404 ದಿನಾಂಕ: 07 JUL 2017

ಗೆ,

ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ,
ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ನಿಗಮ ಕಛೇರಿ,
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ನಿಗಮ ಕಛೇರಿ,
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂ.ನಿ), ನಿಗಮ ಕಛೇರಿ,
ಚಾವಿಸನಿನಿ.

ಮಾನ್ಯರೆ,

ವಿಷಯ;– ಸರಕು ಮತ್ತು ಸೇವಾ ತೆರಿಗೆಯ ನೋಂದಣಿ, ದರ ಇತ್ಯಾದಿಗಳ ಬಗ್ಗೆ.

**********

ದಿನಾಂಕ 01.07.2017 ರಿಂದ ದೇಶಾದ್ಯಂತ ಘನ ಭಾರತ ಸರ್ಕಾರವು ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೆ ತಂದಿರುತ್ತದೆ, ಸದರಿ ನಿಯಮಗಳನ್ನು ಮತ್ತು ಜಿ.ಎಸ್.ಟಿ. ದರ, ಇತ್ಯಾದಿಗಳನ್ನು ನಿಗಮದಲ್ಲಿ ಅಳವಡಿಸಿ ಕೊಳ್ಳಬೇಕಾಗಿರುತ್ತದೆ, ಈ ಸಂಬಂಧ ಈ ಕೆಳಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರಲಾಗಿದೆ.

1. ಹಾಲಿ ನಿಗಮವು ಸರಕು ಮತ್ತು ಸೇವಾ ತೆರಿಗೆ ನಿಯಮಾನ್ವಯ ನೋಂದಣಿಯಾಗಿದ್ದು, ನೋಂದಣಿ ಸಂಖ್ಯೆ: **"29AACCC6636P1Z1"** ಯನ್ನು ತಾತ್ಕಾಲಿಕವಾಗಿ ಪಡೆಯಲಾಗಿದ್ದು, ಇದನ್ನು ಸಂಬಂಧಿಸಿದವರ ಗಮನಕ್ಕೆ ತರತಕ್ಕದ್ದು.

2. ನಿಗಮಕ್ಕೆ ಸಂಬಂಧಿಸಿದ ಸರಬರಾಜುದಾರರ, ಸೇವೆ ಪೂರೈಕೆದಾರರಿಗೆ ಸಂಬಂಧಿಸಿದ ಜಿ.ಎಸ್.ಟಿ ನೋಂದಣಿ ಸಂಖ್ಯೆಗಳನ್ನು ಸಹ ಪಡೆಯತಕ್ಕದ್ದು ಹಾಗೂ ಆ ನೋಂದಣಿ ಸಂಖ್ಯೆಗಳು ಸರಿಯಾಗಿರುವ ಬಗ್ಗೆ ಅಂತರ್ಜಾಲದ ಮೂಲಕ ಅಥವಾ ಸಂಬಂಧಿಸಿದ ಪ್ರಾಧಿಕಾರದ ಮೂಲಕ ಖಾತರಿಪಡಿಸಿ ಕೊಳ್ಳತಕ್ಕದ್ದು.

3. ನಿಗಮಕ್ಕೆ ಅಗತ್ಯವಿರುವ ವಸ್ತುಗಳನ್ನು ಹಾಗೂ ಸೇವೆಗಳನ್ನು ಖರೀದಿಸುವಾಗ/ಪಡೆಯುವಾಗ ಜಿ.ಎಸ್.ಟಿ ನೋಂದಣಿದಾರರಿಂದಲೇ ಪಡೆಯಲು ಕ್ರಮ ಜರುಗಿಸುವುದು.

ಪು.ತಿ.ನೋ.

4. ಜಿ.ಎಸ್.ಟಿ. ನೋಂದಣಿ ಮಾಡಿಸದ ಸರಬರಾಜುದಾರರಿಂದ ಅಥವಾ ಸೇವೆ ಪೂರೈಕೆದಾರರಿಂದ ಸಾಮಗ್ರಿಗಳನ್ನು ಖರೀದಿಸಿದ್ದಲ್ಲಿ ಅಥವಾ ಸೇವೆಯನ್ನು ಪಡೆದಿದ್ದಲ್ಲಿ ಇದರಿಂದ ನಿಯಮಾವಳಿಗಳ ಪ್ರಕಾರ ಯಾವುದಾದರು ಬಡ್ಡಿ ಅಥವಾ ದಂಡ ಹಾಗೂ ಇತರೆ ಶುಲ್ಕಗಳನ್ನು ಭರಿಸಬೇಕಾದ ಸಂದಂರ್ಭ ಉಂಟಾದರೆ ಸಂಬಂಧಿಸಿದ ಅಧಿಕಾರಿ/ ನೌಕರರೇ ಹೊಣೆಗಾರರಾಗಿರುತ್ತಾರೆ.

5. ನಿಗಮದಲ್ಲಿ ಉಪಯೋಗಿಸುವ ಸಾಮಾಗ್ರಿಗಳು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ ದರಗಳ ಪ್ರಕಾರ ಅನ್ವಯವಾಗುವ ದರಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗಿರುತ್ತದೆ. ಅವುಗಳನ್ನು ನಿಗಮದ ಅಂತರ್ಜಾಲವಾದ **www.cescmysore.org/Notification/Tax matter-GST.** ರಲ್ಲಿ ಪಡೆಯುವುದು. ಸದರಿ ಪಟ್ಟಿಯಲ್ಲಿ ಏನಾದರು ಲೋಪದೋಷಗಳಿದ್ದಲ್ಲಿ ಅದನ್ನು ನಿಗಮ ಕಛೇರಿಯ ತೆರಿಗೆ ಶಾಖೆಯ ಗಮನಕ್ಕೆ ತರತಕ್ಕದ್ದು.

6. ಈ ಜಿ.ಎಸ್.ಟಿ. ದರಗಳು ದಿನಾಂಕ: 01.07.2017 ಹಾಗೂ ನಂತರದ ವ್ಯವಹಾರ/ ವಹಿವಾಟುಗಳಿಗೆ ಮಾತ್ರ ಅನ್ವಯವಾಗಲಿದೆ.

7. ದಿನಾಂಕ: 01.07.2017 ರ ಹಿಂದಿನ ವ್ಯವಹಾರ/ ವಹಿವಾಟುಗಳಿಗೆ ಆಗ ಚಾಲ್ತಿಯಲ್ಲಿದ್ದ ಕರ್ನಾಟಕ ಮೌಲ್ಯವರ್ಧಿತ ತೆರಿಗೆ, ಕೇಂದ್ರ ಮಾರಟ ತೆರಿಗೆ, ಸೇವಾ ತೆರಿಗೆಗಳು ಅನ್ವಯವಾಗಲಿದೆ. ಸದರಿ ತೆರಿಗೆ ಮೊತ್ತಗಳನ್ನು ಸಂಬಂಧಿಸಿದ ಲೆಕ್ಕಘಟಕಗಳು ನಿಗಧಿತ ಸಮಯದಲ್ಲಿ ಪಡೆದಿರುವ ನೋಂದಣಿ ಸಂಖ್ಯೆಗಳ ಮೂಲಕ ತೆರಿಗೆ ಮೊತ್ತವನ್ನು ಪಾವತಿಸಿ ರಿಟರ್ನ್ಸ್‌ನ್ನು ಫೈಲಿಂಗ್ ಮಾಡುವುದು.

8. ದಿನಾಂಕ: 01.07.2017 ರ ಹಿಂದಿನ ವ್ಯವಹಾರ/ ವಹಿವಾಟುಗಳು/ ಪಡೆದಿರುವ ಸೇವೆಗಳಿಗೆ / ಗುತ್ತಿಗೆದಾರರ ಹುಂಡಿಗಳು ಹಾಗೂ ಇತ್ಯಾದಿಗಳು ಏನಾದರು ಇದ್ದಲ್ಲಿ ಅವುಗಳನ್ನು ಈ ಕೆಳಕಂಡಂತೆ ಪಾಸುಮಾಡಿ ಪಾವತಿಸತಕ್ಕದ್ದು.

| Sl. No. | Description | Processed and Passed before | Due date for Payment of Taxes as per respective Acts |
|---|---|---|---|
| 1 | All Suplliers/ Contractor Bills for Execution / Maintenance Works | 15.07.2017 | On or Before 20th July 2017 |
| 2 | All Service Bills Attracting Service Taxes | 05.07.2017 | On or Before 06th July 2017 |

ಮು.ತಿ.ನೋ.

೯. ನಿಗಮವು ನೀಡುವ ಸೇವೆಗಳ ಸಂದಂರ್ಭದಲ್ಲಿ ಪಡೆಯುವ ಶುಲ್ಕಗಳಿಗೆ ಹಾಲಿ ಜಿ.ಎಸ್.ಟಿ ನಿಯಮಾವಳಿಗಳ ಪ್ರಕಾರ ಸರಕು ಪಟ್ಟಿ(**Invoice**) ಗಳನ್ನು ನೀಡುವುದು. ಸದರಿ ಸರಕು ಪಟ್ಟಿ(**Invoice**) ಗಳ ನಮೂನೆಯನ್ನು **GST Tax Invoice Rules-2017** ರಲ್ಲಿ ನಮೂದಿಸಿರುವ **Form GST INV-1** ರಂತೆ ನೀಡುವುದು. ಸದರಿ **Invoice** ನಮೂನೆಗಳನ್ನು ಅಂತರ್ಜಾಲದಲ್ಲಿ ಪಡೆಯಬಹುದಾಗಿರುತ್ತದೆ.

10. **Invoice**ಗಳನ್ನು ನೀಡುವ ಸಂದಂರ್ಭದಲ್ಲಿ **Invoice** ಸಂಖ್ಯೆಗಳನ್ನು ಲೆಕ್ಕಘಟಕಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಸ್ಪಷ್ಟವಾಗಿ ನಮೂದಿಸುವುದು (ಉದಾಹರಣೆಗೆ ಕಾ ಮತ್ತು ಪಾ ವಿಭಾಗ ಚಾಮರಾಜನಗರವಾದರೆ **CHN/2017-18,** ಮಡಿಕೇರಿಯಾದರೆ **MDK/2017-18,** ಹಾಸನವಾದರೆ **HSN/2017-18,** ಹಾಸನ ವೃತ್ತ ಕಛೇರಿಯಾದರೆ **HSN Circle/2017-18** ಇತ್ಯಾದಿಗಳನ್ನು ನೀಡಬಹುದಾಗಿರುತ್ತದೆ. ಇವುಗಳು ಕೇವಲ ನಮೂನೆಗಳಾಗಿದ್ದು ಲೆಕ್ಕಘಟಕಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಸ್ಪಷ್ಟವಾಗಿ ನಮೂದಿಸಿ ನೀಡುವುದು)

11. ಈ ಜಿ.ಎಸ್.ಟಿ ನಿಯಾಮಾಳಿಗಳ ಪ್ರಕಾರ ಟಿ.ಡಿ.ಎಸ್/ಟಿ.ಸಿ.ಎಸ್‌ಗಳನ್ನು ವೇತನ ಭಟವಾಡೆ ಅಧಿಕಾರಿಗಳೇ ಮಾಡಬೇಕಾಗಿದ್ದು, ಅದನ್ನು ಲೆಕ್ಕಘಟಕಗಳು ತಮ್ಮ ಹಂತದಲ್ಲಿಯೇ ಜಿ.ಎಸ್.ಟಿ ಪ್ರಾಧಿಕಾರದೊಂದಿಗೆ ಪ್ರತ್ಯೇಕವಾಗಿ ಪಡೆಯತಕ್ಕದ್ದು, ಇದಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು WWW.GST.GOV.IN ನಲ್ಲಿ ಪಡೆಯುವುದು.

ತಮ್ಮ ವಿಶ್ವಾಸಿ

ಮುಖ್ಯ ಆರ್ಥಿಕ ಅಧಿಕಾರಿ.
ಚಾವಿಸನಿನಿ., ಮೈಸೂರು.